ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ : ಕಸಂವಿ/ಪ್ರ./01/2025-26 ದಿನಾಂಕ : 03.10.2025

ಪ್ರಕಟಣೆಗಾಗಿ

ಗೆ,

ಮಾನ್ಯ ಸಂಪಾದಕರು,

ಸಂಸ್ಕೃತ ಗ್ರಂಥ ಪುರಸ್ಕಾರ – 2022 ಮತ್ತು 2023, 2024ನೇ ಸಾಲಿನ
ಮೂರು ವರ್ಷದ ಗ್ರಂಥ ಪುರಸ್ಕಾರ ನೀಡುವ ಬಗೆಗೆ.

* * *

ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಶಿಕ್ಷಣ ಮತ್ತು ಸಂಶೋಧನೆಗಳ ಬಲವರ್ಧನೆಗಾಗಿ ರಾಜ್ಯಸರ್ಕಾರವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ವಿಶ್ವವಿದ್ಯಾಲಯವು ಪದವಿಗಳನ್ನು ನೀಡುವುದರ ಜೊತೆಗೆ ಸಂಸ್ಕೃತ ಭಾಷೆಯ ಪ್ರಸಾರ – ಅಭಿವೃದ್ಧಿಗಳ ದೃಷ್ಟಿಯಿಂದ ಹಲವು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಗ್ರಂಥಪುರಸ್ಕಾರ ಯೋಜನೆಯೂ ಸಹ ಒಂದಾಗಿದೆ.

ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಸಾಹಿತ್ಯ ರಚನೆ/ಗ್ರಂಥ ರಚನೆ ಮತ್ತು ಪ್ರಕಾಶನದ ಉದ್ಯಮವು ಬಹಳ ದೀರ್ಘ ಇತಿಹಾಸವನ್ನು ಹೊಂದಿದೆ. ಇಂದಿಗೂ ಅನೇಕ ವಿದ್ವಾಂಸರು ಸಂಸ್ಕೃತ ವಾಙ್ಮಯದ ಗದ್ಯ, ಪದ್ಯ ರಚನೆಯಲ್ಲಿ ತೊಡಗಿದ್ದಾರೆ. ಅನೇಕ ಯುವಪ್ರತಿಭೆಗಳೂ ಇಂಥ ಗ್ರಂಥರಚನೆಯಲ್ಲಿ ತಮ್ಮ ಕೌಶಲ್ಯ ತೋರಿಸುತ್ತಿದ್ದಾರೆ. ಪ್ರತಿವರ್ಷ ಸಂಸ್ಕೃತವಾಙ್ಮಯ ಪ್ರಪಂಚಕ್ಕೆ ಕರ್ನಾಟಕ ರಾಜ್ಯದ ಗ್ರಂಥಕರ್ತೃಗಳ ಕೊಡುಗೆಯೂ ಗಣನೀಯವಾಗಿದೆ. ಇಂತಹ ಸೃಜನಶೀಲರಚನೆಗಳಿಗೆ ರಾಜ್ಯಮಟ್ಟದಲ್ಲಿ ಯಾವುದೇ ಪ್ರೋತ್ಸಾಹ ಪುರಸ್ಕಾರಗಳು ದೊರಕುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010-11ನೇ ಸಾಲಿನಿಂದ "ಗ್ರಂಥ ಪುರಸ್ಕಾರ ಯೋಜನೆ" ಯನ್ನು ಆರಂಭಿಸಿ, ಕಳೆದ 13 ವರ್ಷಗಳ ಸಮಕಾಲಿನ ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರ ನೀಡಿದೆ. ಪುರಸ್ಕಾರವು ಒಂದು ಪ್ರಶಸ್ತಿ ಫಲಕ, ಶಾಲು ಮತ್ತು 10,000/- ರೂಗಳ ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ 2022, 2023 ಮತ್ತು 2024ನೇ ಸಾಲಿನ ಗ್ರಂಥ ಪುರಸ್ಕಾರಕ್ಕೆ ಅರ್ಹ ಗ್ರಂಥಗಳನ್ನು ಆಹ್ವಾನಿಸಿ ಲೇಖಕರು ತಮ್ಮ ಕೃತಿಗಳನ್ನು 2025 October 27 ರೊಳಗೆ **ಪ್ರಸಾರಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ** ಕಳುಹಿಸಲು ಕೋರಿದೆ. ಕಳೆದ ಐದು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುವುದು.

ವಿಶ್ವವಿದ್ಯಾಲಯದ ಅಂತರ್ಜಾಲತಾಣ www.ksu.ac.in ನಲ್ಲಿ "ಸಂಸ್ಕೃತ ಗ್ರಂಥ ಪುರಸ್ಕಾರ ಯೋಜನೆ"ಯ ಸಂಪೂರ್ಣ ವಿವರ ಲಭ್ಯವಿದೆ.

ಸಂಸ್ಕೃತ ಗ್ರಂಥ ಪುರಸ್ಕಾರಕ್ಕೆ ಅರ್ಹವಾದ ವಾಙ್ಮಯ ಪ್ರಕಾರಗಳು:

1. ಕಾದಂಬರಿ/ ಕಥಾ ಸಾಹಿತ್ಯ
2. ಗದ್ಯ/ಪದ್ಯ/ಕಾವ್ಯ, ನಾಟಕ ಸಾಹಿತ್ಯ
3. ಗ್ರಂಥಸಂಪಾದನ ಸಾಹಿತ್ಯ
4. ಪ್ರಬಂಧ ವಿಮರ್ಶನ ಸಾಹಿತ್ಯ ವಿಜ್ಞಾನ ಸಾಹಿತ್ಯ
5. ಇತರ ಭಾಷೆಗಳಿಂದ ಸಂಸ್ಕೃತಕ್ಕೆ ಅನುವಾದ
6. ಶಾಸ್ತ್ರೀಯ ಗ್ರಂಥದ ಕನ್ನಡ ಅನುವಾದ
7. ಸಂಸ್ಕೃತದ ಅತ್ಯುತ್ತಮ ಸಂಶೋಧನಾ ಪ್ರಬಂಧ (ಪಿಹೆಚ್‌ಡಿ) ವಿದ್ಯಾವಾರಿಧಿ
8. ಅತ್ಯುತ್ತಮ ಇಂಡಾಲಜಿ ವಿಮರ್ಶ ಗ್ರಂಥ ಅಥವಾ ಲೇಖನ ಸಂಗ್ರಹ
9. ಸಂಶೋಧನಾ ವಿದ್ಯಾರ್ಥಿಗಳ ಅತ್ಯುತ್ತಮ ಸಂಶೋಧನಾ ಲೇಖನ (ಸುದೀರ್ಘ – 80 ಪುಟಗಳು)
10. ಶಿಕ್ಷಕರ ಅತ್ಯತ್ತಮ ಸಂಶೋಧನಾ ಲೇಖನ (80–100 ಪುಟಗಳು)

ಷರತ್ತುಗಳು:

ಈ ಅರ್ಹ ಗ್ರಂಥಗಳನ್ನು ವಿದ್ವಾಂಸರು, ಗ್ರಂಥದ ಮೂರು ಪ್ರತಿಗಳನ್ನು **ಉಪ ನಿರ್ದೇಶಕರು** ಪ್ರಸಾರಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕಳುಹಿಸುವುದು.

- 2024ನೇ ಸಾಲಿನವರೆಗೆ ಮುದ್ರಣವಾದ ಪುಸ್ತಕಗಳಿಗೆ ಗ್ರಂಥಪುರಸ್ಕಾರ ನೀಡಲಾಗುತ್ತದೆ.
- 2025ನೇ ಸಾಲಿನಲ್ಲಿ ಮುದ್ರಣವಾದ ಪುಸ್ತಕಗಳಿಗೆ ಗ್ರಂಥಪುರಸ್ಕಾರ ನೀಡಲಾಗುವುದಿಲ್ಲ.
- ಈಗಾಗಲೇ ಪುರಸ್ಕಾರ ನೀಡಿರುವವರಿಗೆ ಮತ್ತೆ ನೀಡಲಾಗುವುದಿಲ್ಲ.

**ಹೆಚ್ಚಿನ ಮಾಹಿತಿಗಾಗಿ:**

**ಡಾ. ಗೋವಿಂದ ಬಿ.** ಉಪ ನಿರ್ದೇಶಕರು ಪ್ರಸಾರಾಂಗ, ಕಸಂವಿ, ಬೆಂಗಳೂರು – 18
ಮೊಬೈಲ್ ನಂಬರ್ :09632079891

**ಡಾ. ಮಲ್ಲನಗೌಡ ಎಸ್.** ಉಪ ನಿರ್ದೇಶಕರು, (ಪ್ರ.) ಕಸಂವಿ, ಬೆಂಗಳೂರು – 18
ಮೊಬೈಲ್ ನಂಬರ್: 09341090772
ಇ–ಮೈಲ್: prasarangaksu@gmail.com
ದೂರವಾಣಿ: 080–26701303, 26705387,

ಈ ಯೋಜನೆಯ ವಿವರಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಈ ಮೂಲಕ ಕೋರುತ್ತೇನೆ.

ಕುಲಸಚಿವರು

ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು-560018